ಸಂಘಟನೆಯಲ್ಲಿ ಸಕ್ರಿಯರಾಗಿ ಕವಿತೆಯನ್ನು ಬೀದಿಗೆ ತಂದು 'ಬಂದೂಕಿನ ಬಾಯಲ್ಲಿ ಗುಬ್ಬಿಗಳ ಗೂಡು ಕಟ್ಟಿ'ಸಿದವರು ಚೆನ್ನಣ್ಣ ಮತ್ತವರ ಗೆಳೆಯರು. ಆಗ, ಅದಕ್ಕಿಂತ ಮುಂಚೆಯೇ ಬರೆಯಲು ಆರಂಭಿಸಿದ್ದ ಕವಿತೆ ಅವರ ಶಕ್ತಿ. 'ಯಾವ ಅಕ್ಷರದಿಂದ ಬರೆದು ತೋರಿಸಲಯ್ಯ ನನ್ನ ಜನಗಳಿಗಾದ ಎದೆಯ ಬ್ಯಾನಿ' ಎಂದು ಕೇಳುವ ಚೆನ್ನಣ್ಣ 'ನೀ ಹೋದ ಮರುದಿವಸ ಮೊದಲಂಗೆ ಆಗ್ಯಾದ ನಮ ಬದುಕು ಬಾಬಾ ಸಾಹೇಬ' ಎಂಬ ಹಾಡುಗಳನ್ನು ಬರೆದಿದ್ದಾರೆ. ಆಗ ಡಪ್ಪಿಡಿದು ಹಾಡಿದ ಇದು ಮತ್ತು ಈ ತರಹದ ಗೀತೆಗಳು 'ವೈರಲ್' ಆಗಿದ್ದವು. ಓದುಗರಿಗಿಂತ ಹೆಚ್ಚಾಗಿ ಕೇಳುಗರ ಗಮನ ಸೆಳೆದಿದ್ದವು. ಚೆನ್ನಣ್ಣನ ಕಾವ್ಯದ ಕಸುವು ಇರುವುದು ಕೂಡ ಇಂತಹ ಕವಿತೆಗಳಲ್ಲಿಯೇ ಎಂಬುದರಲ್ಲಿ ಎರಡು ಮಾತಿಲ್ಲ. 'ಮರದ ಮೇಲಿನ ಗಾಳಿ'ಯಿಂದ ಆರಂಭವಾದ ಚೆನ್ನಣ್ಣನ ಕಾವ್ಯಯಾನ ಪ್ರಕಟಿಸಿದ ಏಳು ಕವನ ಸಂಕಲನಗಳ ಮೂಲಕ ಹಾಯ್ದು 'ಮಹಾಕಾವ್ಯ'ಗಳಲ್ಲಿ ಬಂದು ನಿಂತಿತು.

ಹೈದರಾಬಾದ್ ಕರ್ನಾಟಕದ ಆಡುಮಾತಿಗೆ ದನಿ–ಧ್ವನಿ ಕೊಟ್ಟವರಲ್ಲಿ ಚೆನ್ನಣ್ಣ ಕೂಡ ಒಬ್ಬರು. ಅವರ ಕತೆ–ಕಾದಂಬರಿಗಳು ಕೇವಲ ಪ್ರಾದೇಶಿಕ ಭಾಷಾ ಸೊಗಡನ್ನು ಮಾತ್ರ ನೀಡಲಿಲ್ಲ. ಮೂರು ಕಥಾಸಂಕಲನ ಹಾಗೂ ಐದು ಕಾದಂಬರಿಗಳು ಚೆನ್ನಣ್ಣನ ಸೃಜನಶೀಲತೆಯ ಮತ್ತೊಂದು ಮಗ್ಗುಲನ್ನು ದಾಖಲಿಸುತ್ತವೆ. ಕನ್ನಡ ಅಕ್ಷರಲೋಕಕ್ಕೆ ಪರಕೀಯವಾಗಿದ್ದ ಲೋಕವೊಂದನ್ನು ಅನಾವರಣ ಮಾಡಿದವು. 'ಬೆಳ್ಯ'ದಂತಹ ಮಹತ್ವದ ಕಾದಂಬರಿಗೆ ಸಿಕ್ಕಬೇಕಾದ ನ್ಯಾಯ ಸಿಗಲಿಲ್ಲ ಎಂಬುದು ವಾಸ್ತವ. ಆರು ಡಪ್ಪಿನಾಟಗಳನ್ನು ಬರೆಯುವುದರ ಜೊತೆಗೆ ಚೆನ್ನಣ್ಣ ಅವರು ಜಾನಪದ ಕ್ಷೇತ್ರದಲ್ಲಿ ಮಾಡಿದ ಕೆಲಸ ಚರ್ಚೆಗೆ ಬರಲೇ ಇಲ್ಲ. 'ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ' ಹಾಗೂ ಗುಲ್ಬರ್ಗ ಜಿಲ್ಲೆಯ ಮೋಹರಂ ಪದಗಳ ಸಂಗ್ರಹದಂತಹ ವಿಭಿನ್ನ ಕೆಲಸ ಮಾಡಿದರೂ ಅವಗಣನೆಗೆ ಒಳಗಾದವು. ಅದಕ್ಕೆ ಸಾಂಸ್ಕೃತಿಕ ರಾಜಕಾರಣ ಮಾತ್ರ ಕಾರಣವಲ್ಲ. ಸ್ವತಃ ಲೇಖಕನ ಪಾಲು ಹಾಗೂ ಪಾತ್ರವೂ ಸೇರಿಕೊಂಡಿದೆ.

ಚೆನ್ನಣ್ಣ ಎಂದರೆ ಅರ್ಥವಾಗದ, ಅರ್ಥೈಸಿಕೊಳ್ಳಲಾಗದ ಬೃಹತ್ ಅಗಾಧತೆ ಅವರದೇ ಮಹಾಕಾವ್ಯ 'ವ್ಯೋಮಾವ್ಯೋಮ'ದ ಹಾಗೆ. ನನಗೆ ತೋರುವಂತೆ ಚೆನ್ನಣ್ಣನ ಸಾಹಿತ್ಯ ಅರಿಯಲು ಇರುವ ಏಕೈಕ ಮಾರ್ಗ ಎಂದರೆ ಓದಬಹುದಾದ–ಓದಲೇಬೇಕಾದ 'ವಾಚಿಕೆ'ಯೊಂದನ್ನು ಸಿದ್ಧಪಡಿಸುವುದು. ಚೆನ್ನಣ್ಣ ಇದ್ದಾಗ ಸಮೀಪದಲ್ಲಿದ್ದರೂ 'ದೂರ' ಕಾಪಾಡಿಕೊಂಡಿದ್ದ ಕಣ್ಮರೆಯಾಗುತ್ತಿದ್ದಂತೆಯೇ ಹತ್ತಿರ ಸುಳಿದ ಸಂಗಾತಿಗಳು 'ವಾಚಿಕೆ' ರೂಪಿಸಿದರೆ, ಅದು ಚೆನ್ನಣ್ಣನಿಗೆ ತೋರಿಸುವ ನಿಜವಾದ ಪದಾಂಜಲಿ.

## ದೇವು ಪತ್ತಾರ

ಪತ್ರಕರ್ತ, ಲೇಖಕ ದೇವು ಪತ್ತಾರ ಯಾದಗಿರಿ ಜಿಲ್ಲೆ ಶಹಪುರದವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು ಲಿಂಗ್ವಿಸ್ಟಿಕ್ಸ್ ಹಾಗೂ ಟ್ರಾನ್ಸಲೇಷನ್‌ನಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಅವರ ಪ್ರಮುಖ ಕೃತಿಗಳೆಂದರೆ, 'ಕ್ಯಾಮರಾ ಎಂಜಿನಿಯರ್ ಗುಲಾಂ ಮುಂತಕಾ', 'ಮಹಾದೇವ ಬಾಬಾ ಮೆಡೋಸ್ ಟೇಲರ್' (ಸಂಪಾದಿತ), 'ಈಗ ಹೀಗಿರುವ ಲೋಕದಲ್ಲಿ' (ವ್ಯಕ್ತಿಚಿತ್ರ), 'ಬಹಮನಿ ಸಾಮ್ರಾಜ್ಯ'.